**PRESSMAN**
PRESS CLIPPING

Client: ERA Foundation

| Publication | Kannada Prabha |
| --- | --- |
| Language/Frequency | Kannada/Daily |
| Published from | Bangalore |
| Circulation | 93,000 |
| Date | 11 November 2014 |

Caption: Medical Study Uni-Gauge Exam

ಸುದ್ದಿ ಸಂಕ್ಷೇಪ

Tuesday, 11th November 2014

# ವೈದ್ಯಕೀಯ ವ್ಯಾಸಂಗಕ್ಕೆ ಯೂನಿಗೇಜ್ ಪರೀಕ್ಷೆ

ಬೆಂಗಳೂರು: ವೈದ್ಯಕೀಯ ಕ್ಷೇತ್ರದಲ್ಲಿ ಉನ್ನತ ವ್ಯಾಸಂಗ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ಎರಾ ಫೌಂಡೇಶನ್ 'ಯೂನಿ-ಗೇಜ್ ಮೌಲ್ಯ ಮಾಪನ ವೇದಿಕೆ' ಆರಂಭಿಸಿದೆ.

ಖಾಸಗಿಹಾಗೂಡೀಮ್ಡ್‌ವಿಶ್ವವಿದ್ಯಾಲಯಗಳಲ್ಲಿ ಮೆಡಿಕಲ್, ಸ್ನಾತಕೋತ್ತರ ಪದವಿ ಸೇರಿದಂತೆ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳು ಯೂನಿಗೇಜ್ ಮೂಲಕ ಪರೀಕ್ಷೆ ಬರೆಯಬಹುದು. ಆನ್ ಲೈನ್ ಮೂಲಕ ಆಯಾ ಕೋರ್ಸ್‌ಗೆ ಸಂಬಂಧಿಸಿದ ಪರೀಕ್ಷೆ ಬರೆಯಬಹುದು. ಆನ್‌ಲೈನ್, ಕಂಪ್ಯೂಟರೀಕೃತ ಹಾಗೂ ಬಹು ವಿಶ್ವವಿದ್ಯಾಲಯದ ಪರೀಕ್ಷೆಯನ್ನೂ ಇದು ಒಳಗೊಂಡಿದ್ದು, ಫೆ.15 ರಂದು 30 ಕ್ಕೂ ಹೆಚ್ಚು ನಗರಗಳಲ್ಲಿ ಪರೀಕ್ಷೆ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಫೌಂಡೇಶನ್‌ನ ಮುಖ್ಯಸ್ಥ ಡಾ.ಎಂ.ಆರ್. ಜಯರಾಂ, ಯೂನಿ-ಗೇಜ್ ಅಂಕಪಟ್ಟಿ ಪಡೆಯಲುದೇಶದಹಲವುವಿಶ್ವವಿದ್ಯಾಲಯಗಳು ಈಗಾಗಲೇ ಸಹಭಾಗಿತ್ವ ಪಡೆದುಕೊಂಡಿವೆ. ಬೆಂಗಳೂರು, ವೆಲ್ಲೂರು, ಫರೀದಾಬಾದ್, ಕೋಲಾರ, ಮೈಸೂರು ವಿಶ್ವವಿದ್ಯಾಲಯಗಳಲ್ಲೂ ಪರೀಕ್ಷೆ ನಡೆಸಲಾಗುತ್ತದೆ. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ನೀಡುವುದರ ಜತೆಗೆ ಅಧಿಕೃತ ಪ್ರಮಾಣ ಪತ್ರವೂ ದೊರೆಯುತ್ತದೆ. ಪರೀಕ್ಷೆ ಹಾಗೂ ತರಬೇತಿಗೆ ಆರ್ಥಿಕ ಸಹಾಯ, ಸಲಹೆ ಹಾಗೂ ವೃತ್ತಿಪರ ಕನ್ಸಲ್ಟೆನ್ಸಿ ನೀಡುವ ಯೋಜನೆಗಳನ್ನೂ ಫೌಂಡೇಶನ್ ಹೊಂದಿದೆ ಎಂದು ತಿಳಿಸಿದರು.

ಫೌಂಡೇಶನ್ ಸದಸ್ಯರಾದ ಡಾ.ಕೆ.ಆರ್. ಎಸ್.ಮೂರ್ತಿ, ಡಾ.ಜಿ.ವಿಶ್ವನಾಥನ್ ಹಾಜರಿದ್ದರು. ಹೆಚ್ಚಿನ ಮಾಹಿತಿಗೆ 9632310715 ಅಥವಾ anoop@erafoundation.org ಸಂಪರ್ಕಿಸಬಹುದು.